**ಕರ್ನಾಟಕ ಸರಕಾರ**

ಕ್ರ.ಸಂ: ಬಿಜಿಎಂ:ಡಿಯುಡಿಸಿ:5:ಸಿಆರ್‌–32:2012–13

ಜಿಲ್ಲಾಧಿಕಾರಿಗಳ ಕಾರ್ಯಾಲಯ
ಜಿಲ್ಲಾ ನಗರಾಭಿವೃದ್ಧಿ ಕೋಶ,
ಬೆಳಗಾವಿ, ದಿನಾಂಕ:16.07.2012

**ವಿಷಯ:**–ಅ.ಸೂ.ಕ್ಷೇ.ಸ. ಗೋಕಾಕ ಫಾಲ್ಸ್‌ಗೆ 2012–13ನೇ ಸಾಲಿನಲ್ಲಿ ಎಸ್.ಎಫ್.ಸಿ (ಮುಕ್ತನಿಧಿ) ಯೋಜನೆಗೆ ನಿಗಧಿಪಡಿಸಿದ ಅನುದಾನದಡಿ ತೆಗೆದುಕೊಳ್ಳಲು ಉದ್ದೇಶಿಸಿರುವ ಕಾಮಗಾರಿಗಳ ಕ್ರಿಯಾ ಯೋಜನೆ ಅನುಮೋದನೆ ನೀಡುವ ಕುರಿತು.

**ಓದಿತು**:–1)ಸರ್ಕಾರಿ ಆದೇಶ ಸಂಖ್ಯೆ: ನಅಇ:26:ಎಸ್.ಎಫ್.ಸಿ:2012, ಬೆಂಗಳೂರು, ದಿನಾಂಕ: 19.04.2012

2)ಸರ್ಕಾರಿ ಸುತ್ತೋಲೆ ಸಂಖ್ಯೆ: ನಅಇ:33:ಎಸ್‌ಎಫ್‌ಸಿ:2010, ದಿನಾಂಕ: 06.06.2011

3)ಸರ್ಕಾರಿ ಸುತ್ತೋಲೆ ಸಂಖ್ಯೆ: ನಅಇ:415:ಜಿಇಎಲ್:2011, ದಿನಾಂಕ: 27.02.2012 (3 ಸುತ್ತೋಲೆಗಳು)

4)ಸರ್ಕಾರಿ ಸುತ್ತೋಲೆ ಸಂಖ್ಯೆ:ಪೌನಿ:ಅಭಿವೃದ್ಧಿ:22.75%:ಸಿಆರ್–18/2011–12 ದಿನಾಂಕ: 13.03.2012

5)ಮುಖ್ಯಾಧಿಕಾರಿ, ಅ.ಸೂ.ಕ್ಷೇ.ಸ. ಗೋಕಾಕ ಫಾಲ್ಸ್ ಇವರ ಪತ್ರ ಸಂಖ್ಯೆ: ಎನ್‌ಎಸಿ:ಗೋಫಾ:ಎಸ್‌ಎಫ್‌ಸಿ.ಅ.ಕಾಮಗಾರಿ.ಕು:2012–13/66 ದಿನಾಂಕ: 10.07.2012

**ಪ್ರಸ್ತಾವನೆ:**

ಓದಿತು (1)ರ ಸರ್ಕಾರಿ ಆದೇಶದನ್ವಯ 2012–13ನೇ ಸಾಲಿನಲ್ಲಿ ಎಸ್.ಎಫ್.ಸಿ (ಮುಕ್ತನಿಧಿ) ಯೋಜನೆಯಡಿ ಅ.ಸೂ.ಕ್ಷೇ.ಸ. ಗೋಕಾಕ ಫಾಲ್ಸ್‌ಗೆ ` 163.62 ಲಕ್ಷಗಳಿಗೆ ಅನುದಾನ ನಿಗಧಿಪಡಿಸಲಾಗಿದೆ. ಓದಿತು (6)ರನ್ವಯ ಮುಖ್ಯಾಧಿಕಾರಿ, ಅ.ಸೂ.ಕ್ಷೇ.ಸ. ಗೋಕಾಕ ಫಾಲ್ಸ್ ಇವರು ಸಲ್ಲಿಸಿರುವ ಪ್ರಸ್ತಾವನೆಯಲ್ಲಿ ` 163.62 ಲಕ್ಷಗಳಿಗೆ 22 ಕಾಮಗಾರಿಗಳ ಕ್ರಿಯಾ ಯೋಜನೆ ತಯಾರಿಸಿದ್ದು, ಅದರಲ್ಲಿ ಶೇ.22.75ರಷ್ಟು ಪ.ಜಾತಿ/ ಪ.ಪಂಗಡದ ಜನಾಂಗದವರಿಗೆ ` 37.22 ಲಕ್ಷಗಳಿಗೆ 07 ಕಾಮಗಾರಿಗಳನ್ನು ಕಾಯ್ದಿರಿಸಿ, ಶೇ.7.25ರಷ್ಟು ನಗರದ ಇತರೆ ಬಡ ಜನರ ಕಲ್ಯಾಣ ಕಾರ್ಯಕ್ರಮ ಹಾಗೂ ಶೇ.3ರಷ್ಟು ಅಂಗವಿಕಲರ ಕಲ್ಯಾಣ ಕಾರ್ಯಕ್ರಮಗಳ ಅನುದಾನದಡಿ ಕಾಮಗಾರಿಗಳನ್ನು ತೆಗೆದುಕೊಳ್ಳಲು ಅ.ಸೂ.ಕ್ಷೇ.ಸ. ಗೋಕಾಕ ಫಾಲ್ಸ್‌ದಲ್ಲಿ ಲಭ್ಯವಿಲ್ಲದೇ ಇರುವುದರಿಂದ ಸದರಿ ಘಟಕಗಳ ಅನುದಾನವನ್ನು ಉಳಿಕೆ ಅನುದಾನದ ಘಟಕ 'ಎ' ಮತ್ತು 'ಬಿ' ಗಳಿಗೆ ಕಾಯ್ದಿರಿಸಿ ಕ್ರಿಯಾ ಯೋಜನೆ ಅನುಮೋದನೆಗೆ ಸಲ್ಲಿಸಿರುತ್ತಾರೆ. ಸದರಿ ಪ್ರಸ್ತಾವನೆಯನ್ನು ಓದಿತು (2), (3) ಹಾಗೂ (4)ರ ಸರ್ಕಾರದ ಸುತ್ತೋಲೆ ಮಾರ್ಗಸೂಚಿಗಳ ಪ್ರಕಾರ ಪರಿಶೀಲಿಸಿ ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಅನುಮೋದನೆ ನೀಡಲು ಪರಿಗಣಿಸಿ ಆದೇಶಿಸಿದೆ.

## ಆದೇಶ

ಮೇಲಿನ ಪ್ರಸ್ತಾವನೆಯಂತೆ ಅ.ಸೂ.ಕ್ಷೇ.ಸ. ಗೋಕಾಕ ಫಾಲ್ಸ್‌ಗೆ 2012–13ನೇ ಸಾಲಿನ ಎಸ್.ಎಫ್.ಸಿ (ಮುಕ್ತನಿಧಿ) ಯೋಜನೆಯಡಿ ` 163.62 ಲಕ್ಷಗಳಿಗೆ 22 ಕಾಮಗಾರಿಗಳನ್ನು ಕೈಕೊಳ್ಳಲು ಕ್ರಿಯಾ ಯೋಜನೆಗೆ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಅನುಮೋದನೆ ನೀಡಿ ಆದೇಶಿಸಿದೆ.

ನಿಗಧಿಪಡಿಸಿರುವ ಮೊತ್ತ : ` 163.62 ಲಕ್ಷಗಳು

ಸಲ್ಲಿಸಿರುವ ಕ್ರಿಯಾ ಯೋಜನೆ ಮೊತ್ತ : ` 163.62 ಲಕ್ಷಗಳು

ಅನುಮೋದಿತ ಕ್ರಿಯಾ ಯೋಜನೆ ಮೊತ್ತ: ` 163.62 ಲಕ್ಷಗಳು

| ಕ್ರ. ಸಂ. | ಅನುಮೋದಿತ ಕಾಮಗಾರಿ ಹೆಸರು | ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ) |
|---|---|---|
| *1* | *2* | *3* |
| | **ಶೇ.22.75ರಷ್ಟು ಪ.ಜಾತಿ/ ಪ.ಪಂಗಡದ ಜನಾಂಗದವರಿಗೆ ಕಾಯ್ದಿರಿಸಿದ ಕಾಮಗಾರಿಗಳು** | |
| **I** | **ವ್ಯಕ್ತಿ ಸಂಬಂಧಿತ ಅನುಕೂಲತೆಗಳು** | |
| | **ಆರೋಗ್ಯ** | |
| 1 | ಗೋಕಾಕ ಫಾಲ್ಸ್ ವ್ಯಾಪ್ತಿಯಲ್ಲಿ ಬರುವ ಪರಿಶಿಷ್ಟಜಾತಿ ಪರಿಶಿಷ್ಟ ಪಂಗಡದವರಿಗೆ ಶಸ್ತ್ರ ಚಿಕತ್ಸೆಗೆ ಸಹಾಯ ಧನ ಕಾರ್ಯಕ್ರಮ | 1.00 |
| | **ಶಿಕ್ಷಣ** | |
| 2 | ಬಿ.ಇ/ಎಂ.ಬಿ.ಬಿ.ಎಸ್ ಪದವಿದಾರರಿಗೆ ದೆಸ್ಕಟಾಪ್/ಲ್ಯಾಪ್ ಟಾಪ್ ಕಂಪ್ಯೂಟರ ವಿತರಿಸುವ ಕಾರ್ಯಕ್ರಮ | 1.00 |
| 3 | ಪದವಿ ಪೂರ್ವ ಮತ್ತು ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ವಿದ್ಯಾರ್ಥಿಗಳಿಗೆ ವಿಶೇಷ ಸಹಾಯಧನ ನೀಡುವ ಕಾರ್ಯಕ್ರಮ | 2.00 |
| | **ಮೂಲಭೂತ ಸೌಕರ್ಯ** | |
| 4 | ಗೋಕಾಕ ಫಾಲ್ಸದ ವ್ಯಾಪ್ತಿಯಲ್ಲಿ ಬರುವ ಪರಿಶಿಷ್ಟಜಾತಿ ಪರಿಶಿಷ್ಟ ಪಂಗಡದ ಅಂಗವಿಕಲರಿಗೆ ಬೈಸಿಕಲ್ ಖರೀದಿ ಸಲುವಾಗು ಸಹಾಯಧನ ಕಾರ್ಯಕ್ರಮ | 1.00 |
| 5 | ಅಡುಗೆ ಅನೀಲ ಸಂಪರ್ಕ ಒದಗಿಸುವ ಕುರಿತು ಸಹಾಯಧನ | 1.00 |
| | **ಒಟ್ಟು** | **6.00** |
| **II** | **ಸಮುದಾಯ ಆಸ್ತಿಗಳು/ ಸೌಲಭ್ಯಗಳು** | |
| | **ಮೂಲಭೂತ ಸೌಕರ್ಯ** | |
| 6 | ಅಧಿಸೂಚಿತ ಕ್ಷೇತ್ರ ಸಮಿತಿ, ಗೋಕಾಕ ಫಾಲ್ಸದಲ್ಲಿ ಬರುವ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರು ವಾಸಿಸುತ್ತಿರುವ ಓಣಿಯಲ್ಲಿ ಸಿ.ಸಿ.ರಸ್ತೆ ನಿರ್ಮಾಣ ಕಾಮಗಾರಿ | 23.22 |
| 7 | ಅಧಿಸೂಚಿತ ಕ್ಷೇತ್ರ ಸಮಿತಿ, ಗೋಕಾಕ ಫಾಲ್ಸದಲ್ಲಿ ಬರುವ ಬಸ್ಟ್ಯಾಂಡದಿಂದ ರಾಮಮಂದಿರ ವರೆಗೆ ಮರು ಡಾಂಬರೀಕರಣ ಮಾಡುವುದು. | 8.00 |
| | **ಒಟ್ಟು** | **31.22** |
| | **ಶೇ.22.75ರ ಕಾಮಗಾರಿಗಳ ಒಟ್ಟು ಮೊತ್ತ** | **37.22** |
| **ಎ** | **ಉಳಿಕೆ ಅನುದಾನದಲ್ಲಿ ಶೇ.50 ರಷ್ಟು ತೆಗೆದುಕೊಂಡ ಕಾಮಗಾರಿಗಳು** | |
| | **ಸ್ಮಶಾನ ಅಭಿವೃದ್ಧಿ ಕಾಮಗಾರಿಗಳು** | |

| | | |
|---|---|---|
| 8 | ಹಿಂದು, ಮುಸ್ಲಿಂ, ಕ್ರಿಶ್ಚಿಯನ್ ಸ್ಮಶಾನ ಭೂಮಿಯಲ್ಲಿ ಕಂಪೌಂಡ ಗೋಡೆ ನಿರ್ಮಿಸುವುದು. | 15.00 |
| | **ಆಂತರಿಕ ರಸ್ತೆ ಮತ್ತು ಚರಂಡಿ ನಿರ್ಮಾಣ ಕಾಮಗಾರಿಗಳು** | |
| 9 | ರಸ್ತೆಯ ಬದಿಗೆ ಇರುವ ಪುಟಪಾತ್‌ಕ್ಕೆ ಸಿ.ಸಿ ರಸ್ತೆ ನಿರ್ಮಾಣ | 10.00 |
| 10 | ಪೋಸ್ಟ್ ಆಫೀಸದಂದಿ ಆಸ್ಪತ್ರೆಯವರೆಗೆ ಸಿ.ಸಿ ರಸ್ತೆ ನಿರ್ಮಿಸುವದು | 10.00 |
| 11 | ಪಂಪ ಹೌಸದಿಂದ ಮುಖ್ಯ ರಸ್ತೆಯವರೆಗೆ ಸಿ.ಸಿ ಗಟಾರ ಕಾಮಗಾರಿ | 16.40 |
| 12 | ಮಶ್ಜಿದ ಹತ್ತಿರ ಸಿ.ಸಿಗಟಾರ ಮತ್ತು ಪುಟಪಾತ ನಿರ್ಮಿಸುವುದು. | 10.00 |
| 13 | ಕೆಂಪಲ್ ಪಾರ್ಕದಲ್ಲಿ ಕೆನಾಲ್ ಹತ್ತಿರ ಇರುವ ರಸ್ತೆಗೆ ಪುಟಪಾತ ನಿರ್ಮಿಸುವುದು. | 10.00 |
| | **ಒಟ್ಟು** | **71.40** |
| **ಬಿ** | **ಉಳಿಕೆ ಅನುದಾನದಲ್ಲಿ ಶೇ.50 ರಷ್ಟು ತೆಗೆದುಕೊಂಡ ಕಾಮಗಾರಿಗಳು** | |
| | **ಘನತ್ಯಾಜ್ಯ ವಸ್ತುಗಳ ನಿರ್ವಹಣೆಯ ಕಾಮಗಾರಿಗಳು** | |
| 14 | ಘನತ್ಯಾಜ್ಯ ವಸ್ತು ಜಾಗೆಯಲ್ಲಿ ವಿಂಡ್ರೋಪ್ಲಾಟ್ ಪಾರ್ಮ ತಯಾರಿಸುವ ಕುರಿತು | 10.00 |
| 15 | ಘನತ್ಯಾಜ್ಯ ವಸ್ತು ವಿಲೇವಾರಿ ಜಾಗೆಗೆ ಹೋಗುವ ರಸ್ತೆಯ ಪಕ್ಕದಲ್ಲಿ ಬೆಂಚ್ ಅಳವಡಿಸುವುದು. | 3.00 |
| 16 | ಘನತ್ಯಾಜ್ಯ ವಸ್ತು ವಿಲೇವಾರಿ ಜಾಗೆಯಲ್ಲಿ ಪಿಟ್ಸ್ ನಿರ್ಮಿಸುವ ಕುರಿತು | 2.00 |
| | **ಇತರೆ** | |
| 17 | ವ್ಹೋಲ್ಕಾರ್ಟ ಅಕಾಡಮಿ ಗಾರ್ಡನ್ ಅಭಿವೃದ್ಧಿಗೊಳಿಸುವುದು. | 10.00 |
| 18 | ಮಾಣಿಕವಾಡಿಯ ಹತ್ತಿರ ಇರುವ ಪ್ಯಾಕ್ಟರಿಯ ಕಂಪೌಂಡ ಗೋಡೆಯ ಹತ್ತಿರದಲ್ಲಿ ಗಾರ್ಡನ್ ಅಭಿವೃದ್ಧಿಗೊಳಿಸುವುದು. | 12.00 |
| 19 | ಬ್ಯಾಡಮಿಂಟನ್ ಹಾಲ್ ಮತ್ತು ಗ್ರಂಥಾಲಯ ಛಾವಣಿ ರಿಪೇರಿ ಮಾಢುವುದು | 5.00 |
| 20 | ಪ್ರೈಮರಿ ಶಾಲೆಯ ಹತ್ತಿರ ಚಿಕ್ಕಮಕ್ಕಳ ಉದ್ಯಾನವನಕ್ಕೆ ಆಟದ ಸಾಮಾನುಗಳನ್ನು ಅಳವಡಿಸುವುದು. | 5.00 |
| 21 | ಮಹಾಲಿಂಗೇಶ್ವರ ಗುಡಿಯ ಹತ್ತಿರ ಕೆಂಪಲ್ ಪಾರ್ಕದಲ್ಲಿ ಹಾಗೂ ಸ್ಟಾಪ್ ಕ್ವಾಟರ್ಸ್ ಹತ್ತಿರ ಸೋಲಾರ ದೀಪ ಅಳವಡಿಸುವುದು. | 5.00 |
| 22 | ಕೊರತೆಯಾಗುವ ಸಿಬ್ಬಂದಿಗಳ ವೇತನಕ್ಕಾಗಿ | 3.00 |
| | **ಒಟ್ಟು** | **55.00** |
| | **ಅಂತೂ ಒಟ್ಟು** | **163.62** |

**ಷರತ್ತುಗಳು:**

1. ಸಕ್ಷಮ ಪ್ರಾಧಿಕಾರದಿಂದ ನಿಯಮಾನುಸಾರ ಆಡಳಿತಾತ್ಮಕ ಮತ್ತು ತಾಂತ್ರಿಕ ಮಂಜೂರಾತಿ ಪಡೆಯುವದು.

2. ಪ್ಯಾಕೇಜ್ ರೀತಿಯಲ್ಲಿ ಅವಶ್ಯಕನುಗುಣವಾಗಿ ಅಲ್ಪಾವಧಿ ಟೆಂಡರ್ ಕರೆಯಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ (KTPP ACT) 1999 ಅನ್ನು ಕಟ್ಟುನಿಟ್ಟಾಗಿ ಪಾಲಿಸಿ ಕ್ರಮ ಕೈಗೊಳ್ಳುವದು.

3. ಸಾಮಗ್ರಿಗಳನ್ನು ಖರೀದಿಸುವ ಮೊದಲು KG1/ KG2/ KG3 ರ ಪ್ರಕಾರ ಟೆಂಡರ್ ಡಾಕುಮೆಂಟ್ ತಯಾರಿಸಿ ಸಕ್ಷಮ ಪ್ರಾಧಿಕಾರದಿಂದ ಮಂಜೂರಾತಿ ಪಡೆದು ಟೆಂಡರ್ ಕರೆಯುವದು.

4. ಕಾಮಗಾರಿ ಗುಣಮಟ್ಟ ಕಾಯ್ದುಕೊಳ್ಳುವದು ಹಾಗೂ 3ನೇ ಪಾರ್ಟಿಯವರಿಂದ ತಪಾಸಣೆ ಮಾಡಿಸಿದ ನಂತರ ಹಣ ಪಾವತಿ ಮಾಡತಕ್ಕದ್ದು.

5. ಈ ಕಾಮಗಾರಿಗಳು ಬೇರೆ ಯಾವುದೇ ಯೋಜನೆ/ ಅನುದಾನದಡಿ ಕೈಗೊಂಡಿರಬಾರದು.

6. ಸಾಮಗ್ರಿಗಳನ್ನು ಅಳತೆ ಪುಸ್ತಕದಲ್ಲಿ ಬರೆದು ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು/ ಕಾರ್ಯನಿರ್ವಾಹಕ ಅಭಿಯಂತರರು ಇವರಿಂದ ಪರಿಶೀಲಿಸಿದ ನಂತರ ಬಿಲ್ಲು ಪಾವತಿ ಮಾಡಿ ಸ್ಟಾಕ್ ಬುಕ್‌ದಲ್ಲಿ ನಮೂದಿಸುವದು.

7. ಶೇ.22.75, ಶೇ.7.25 ಹಾಗೂ ಶೇ.3ರ ಕಾರ್ಯಕ್ರಮಗಳನ್ನು ಸರ್ಕಾರಿ ಸುತ್ತೋಲೆ ಮಾರ್ಗಸೂಚಿಯ ಷರತ್ತು ನಿಬಂಧನೆಗಳಿಗೆ ಒಳಪಟ್ಟು ಅನುಷ್ಠಾನಗೊಳಿಸತಕ್ಕದ್ದು.

**ಸಹಿ/-**
**(ವ್ಹಿ. ಅನ್ಬುಕುಮಾರ)**
ಜಿಲ್ಲಾಧಿಕಾರಿಗಳು, ಬೆಳಗಾವಿ

**ಪ್ರತಿಯನ್ನು:**

1. ಗೌರವಾದರಗಳೊಂದಿಗೆ ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ, ಬೆಂಗಳೂರು ಇವರಿಗೆ ಮಾಹಿತಿಗಾಗಿ ಸಲ್ಲಿಸಲಾಗಿದೆ.

2. ಕಾರ್ಯಪಾಲಕ ಅಭಿಯಂತರರು/ ಸಹಾಯಕ ಕಾರ್ಯಪಾಲಕ ಅಭಿಯಂತರರು ಜಿಲ್ಲಾ ನಗರಾಭಿವೃದ್ಧಿ ಕೋಶ, ಜಿಲ್ಲಾಧಿಕಾರಿಗಳ ಕಾರ್ಯಾಲಯ ಬೆಳಗಾವಿ

3. ಮುಖ್ಯಾಧಿಕಾರಿ, ಅ.ಸೂ.ಕ್ಷೇ.ಸ. ಗೋಕಾಕ ಫಾಲ್ಸ್ ಇವರಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.

**ಸಹಿ/-**
ಯೋಜನಾ ನಿರ್ದೇಶಕರು
ಜಿಲ್ಲಾ ನಗರಾಭಿವೃದ್ಧಿ ಕೋಶ
ಜಿಲ್ಲಾಧಿಕಾರಿಗಳ ಕಾರ್ಯಾಲಯ ಬೆಳಗಾವಿ